ಭಾಷಣ ವರದಿಯಾಗಿತ್ತು. ಯುವಕವಿ ನನ್ನ ಹೆಗಲಮೇಲೆ ಬಂದೂಕವಿಟ್ಟು ವೃದ್ಧಕವಿಯ ಎದೆಗೆ ಢಂ ಎನಿಸಿದ್ದನು. ವರದಿಗಾರನಿಗೆ ಕರೆ ಮಾಡಿ ಜಬರಿಸಿದೆ: 'ಅಲ್ರೀ, ಭಾಷಣದ ಮುಖ್ಯಾಂಶ ವರದಿ ಮಾಡದೆ, ಯಾವುದೊ ಪ್ರಾಸಂಗಿಕ ಮಾತನ್ನೇ ಮುಖ್ಯಸುದ್ದಿ ಮಾಡಿದ್ದೀರಲ್ಲ. ಸರೀನಾ?'. ಅದಕ್ಕಾತ 'ನೀವು ಸಾಹಿತ್ಯದ ಸ್ವೋಪಜ್ಞತೆ, ಪ್ರಕ್ರಿಯೆ, ಪರಿಪ್ರೇಕ್ಷ್ಯ ಅಂತೆಲ್ಲ ಮಾತಾಡಿದರೆ ಯಾರಿಗೆ ಅರ್ಥವಾಗುತ್ತೆ? ಅಸಲಿಗೆ ನಮ್ಮ ಓದುಗರು ಸಾಹಿತ್ಯ ವರದಿ ಗಮನಿಸೋದೇ ಇಲ್ಲ. ಬೇರೆ ಸೆನ್ಸೇಶನಲ್ ಸುದ್ದಿಗಳಿರುವಾಗ ಯಾರು ತಲೆಕೆಡಿಸಿಕೊಳ್ತಾರೆ ಇದಕ್ಕೆ? ಹೊಸತಲೆಮಾರಿನ ಓದುಗರ ಟ್ರೆಂಡೇ ಗೊತ್ತಿಲ್ಲ ನಿಮಗೆ. ಹಲ್ಮಿಡಿ ಶಾಸನದ ಕಾಲದಲ್ಲಿದ್ದೀರಿ. ವರ್ತಮಾನಕ್ಕೆ ಬನ್ನಿ ಸ್ವಾಮಿ. ಅವತ್ತು ಯಾವುದೇ ಇಂಪಾರ್ಟೆಂಟ್ ಫಂಕ್ಷನ್ ಇರಲಿಲ್ಲ ಅಂತ ಬಂದಿದ್ದೆ. ಥ್ಯಾಂಕ್ಸ್ ಹೇಳೋದು ಬಿಟ್ಟು ಆಕ್ಷೇಪ ಮಾಡ್ತಾ ಇದೀರಲ್ಲಾ ಛ್ಛಂ... ' ಇನ್ನೂ ಏನೇನು ಹೇಳುತ್ತಿದ್ದನೊ ಬಾಯಿಹರುಕ. ನನ್ನ ಮೊಬೈಲಿನ ಚಾರ್ಜು ಮುಗಿದು ವಾಗ್ಧಾಳಿ ತಂತಾನೇ ನಿಂತಿತು.

ಭಾಷಣೋತ್ತರ ಘಟ್ಟದಲ್ಲಿ ಕಹಿಯೇ ಹೆಚ್ಚಾಗುವಾಗ, ಸಿಹಿ ಮಾಡುವ ಸಂಗತಿಯೆಂದರೆ ನೆನಪಿನ ಕಾಣಿಕೆ. ಇದಕ್ಕಾಗಿ ಹೇಗಾದರೂ ಇರಲೆಂದು, ಮುದ್ದಾಮಾಗಿ ಹೊಲಿಸಿದ ಬ್ಯಾಗನ್ನು ಜತೆಗೆ ಒಯ್ಯುತ್ತೇನೆ. ಯಾವ ಹಳ್ಳದಲ್ಲಿ ಯಾವ ಮೀನೊ? ಜೈತ್ರಯಾತ್ರೆ ಮುಗಿಸಿ ಮನೆಗೆ ಬಂದು ಉಸ್ಸೆಂದು ಕೂರುವಾಗ ಕೇಳುವ ಮೊದಲ ಪ್ರಶ್ನೆ ಭಾಷಣ ಹೇಗಾಯಿತು ಅಲ್ಲ; ಏನು ಕೊಟ್ಟರು ಎಂದು. ಪುಸ್ತಕ ಶಾಲು ಫಲಕ ಎಂದರೆ ಮನೆಯಾಕೆಯ ಮುಖಕಮಲ ಕುಲುಮೆಯಾಗುತ್ತದೆ. ಇದಕ್ಕೆ ಎರಡು ಸಕಾರಣಗಳಿವೆ. ಒಂದು ನಾನು ತಂದ ಫಲಕಗಳನ್ನೆಲ್ಲ ಜೋಡಿಸಿಟ್ಟು ಮನೆ ಪಾತ್ರೆ ಅಂಗಡಿಯಂತಾಗಿತ್ತು. ಅವಳು 'ಇದೇನು ಮನೇನೊ ಗೋಡೌನೊ? ಇವಕ್ಕಾಗೇ ಬೇರೆ ರೂಂ ಕಟ್ಟಿಸಿಕೊಂಡು ಹೋಗು ಬೇಕಾದರೆ' ಎಂದು ನೋಟಿಸ್ ಕೊಟ್ಟಿದ್ದಳು. ಎರಡು ಫಲಕಗಳ ದೆಸೆಯಿಂದ ಒಳ್ಳೆಯ ಬ್ಯಾಗುಗಳು ಹರಿದುಹೋಗಿದ್ದವು. ಒಂದು ಸಲವಂತೂ ಫಲಕದ ಚೂಪಂಚುಗಳು ಡಾನು ಲಾಂಗಿನಿಂದ ಎದುರಾಳಿಯನ್ನು ಮನಬಂದಂತೆ ಕೊಚ್ಚಿದಂತೆ ಬ್ಯಾಗನ್ನು ಸೀಳಿಹಾಕಿದ್ದವು. ಅಂದಿನಿಂದ ನಾನು ಫಲಕಗಳನ್ನು ಕಾರ್ಯಕ್ರಮದಲ್ಲೇ ಸಿಗುವ ಅಭಿಮಾನಿ ಕೈಗೆ 'ನನ್ನ ಮಧುರ ನೆನಪಿಗೆ' ಎಂದು ದಾಟಿಸಿ ಬರುತ್ತೇನೆ. ಬಸ್ಸು ಅಥವಾ ರೈಲಿನ ಲಗೇಜಟ್ಟದಲ್ಲಿ ಇಟ್ಟು ಮರೆತವನಂತೆ ಬುಳ್ಳನೆ ಇಳಿದುಬರುತ್ತೇನೆ. ಈ ಫಲಕಗಳನ್ನು ಯಾಕಾದರೂ ಕೊಡುತ್ತಾರೊ? ಅದರ ಬದಲು ಬಟ್ಟೆ, ಚಪ್ಪಲಿ, ಪೆನ್ನು ಕೊಟ್ಟರೆ ಉಪಯೋಗಕ್ಕಾದರೂ ಬರುತ್ತದೆ. ನನ್ನ ಆಪ್ತರೊಬ್ಬರು ತಮ್ಮೂರಲ್ಲಿ ಏರ್ಪಟ್ಟ ಸಮಾರಂಭದಲ್ಲಿ ಕೊಡಲು 'ಎಲ್ಲರಂತೆ ನಾನು ಶಾಲು ಪುಸ್ತಕ ಕೊಡಲ್ಲಪ್ಪ. ನಿನಗೇನು ಬೇಕು ಹೇಳು' ಎಂದು ಮುಂಗಡವಾಗಿ ಕೇಳಿದರು. ಅವರು ಗಾಂಧಿವಾದಿಯಾಗಿದ್ದರಿಂದ 'ಖಾದಿಬಟ್ಟೆ' ಎಂದೆ. ಅವರು ಹತ್ತು ಮೀಟರಿನ ದೊಡ್ಡ ಥಾನೊಂದನ್ನು ತಂದು ನನಗೂ ನನ್ನ ಹೆಂಡತಿಗೂ ಸೇರಿಸಿ ಹೊದಿಸಿದರು. ಅದನ್ನು ನಾವು ಪರದೆ, ಜುಬ್ಬ, ಲುಂಗಿ, ಕೈವಸ್ತ್ರ, ಕೈಚೀಲ, ಬೆಡ್‌ಶೀಟುಗಳಿಗೆ ಬಳಸಿದೆವು. ಪರದೆ ಹಳತಾದಾಗ ತುಂಡು ಮಾಡಿ ಸ್ಕೂಟರ್ ಒರೆಸುವುದಕ್ಕೂ ಮಸಿಬಟ್ಟೆಗೂ ಕಾಲೊರಸಿಗೂ ಹಾಕಿಕೊಂಡೆವು. ಖಾದಿಯ ಮೌಲ್ಯ ವುಲನ್ ಶಾಲುಗಳಿಗೆ ಖಂಡಿತ ಇಲ್ಲ. ನನ್ನ ಭೇಟಿಗೆ ಮನೆಗೆ ಬಂದಿದ್ದ ಜನಪದ ಕಲಾವಿದರೊಬ್ಬರಿಗೆ ಕಾರ್ಯಕ್ರಮದಲ್ಲಿ ಕೊಟ್ಟಿದ್ದ ಹಳೇ ಶಾಲೊಂದನ್ನು ಹೊದಿಸಲು ಯತ್ನಿಸಿದಾಗ 'ಬ್ಯಾಡ ಸ್ವಾಮಿ. ಅದರಾಗೆ ಮೂಗು ಒರಸ್ಕೊಳಕೂ ಆಗಲ್ಲ. ಬೇಕಾರ ರೊಕ್ಕ ಕೊಡಿ. ಚಾ–ಗೀ ಕುಡ್ಕೊಂಡು ಹೋಗ್ತೀನಿ' ಎಂದಿದ್ದರು.